ಸಾಕ್ಷಿಯನ್ನು ದಿಃ 17-11-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ. ವಾಯ್ ಡಿ ಟಿ ವಕೀಲರಿಂದಃ(ವಾದಿ ಪರವಾಗಿ)**

ಪ್ರತಿವಾದಿ ನಂ.9 ನನ್ನ ಅಣ್ಣ ನಾಗಪ್ಪನ ಹೆಂಡತಿ ಎಂದರೆ ಸರಿ. ಈ ದಿನ ನಾನು, ನಿಂಗಪ್ಪ ಗೂಳನ್ನವರ, ನಾಗಪ್ಪ ಭಾವಿ ಹಾಗೂ ಸತೀಶ ಗಿಡ್ಡಹನಮನ್ನವರ ಎಲ್ಲರೂ ಕೂಡಿಯೇ ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದರೆ ಸರಿ. ಈ ದಿನ ಸಾಕ್ಷಿ ನುಡಿಯಲು ನಮ್ಮ ಅಣ್ಣ ನಾಗರಾಜ ಹೇಳಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಪ್ಲಾಟ್ ನಂ.57 ಖರೀದಿ ವ್ಯವಹಾರ ಗದಗ ತಾಲೂಕು ಕಚೇರಿಯಲ್ಲಿ ಆಯಿತು. ಖರೀದಿ ವ್ಯವಹಾರದ ಮಾತುಕತೆ ಏನೇನು ಆಯಿತು ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಮಾವ ಅಂದರೆ 1 ನೇ ಪ್ರತಿವಾದಿ ಕರಕಪ್ಪ ತಾಲೂಕು ಕಚೇರಿಗೆ ಕರೆದುಕೊಂಡು ಹೋಗಿ ನನ್ನ ಸಹಿ ಮಾಡಿಸಿದ್ದಾನೆ ಇಷ್ಟು ಬಿಟ್ಟು ನನಗೆ ಬೇರೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿ ನಂ.2 ಗಿರಿಜವ್ವ ಆಸ್ತಿ ಖರೀದಿಸುವ ಸಲುವಾಗಿ ಯಾವುದೇ ಒಂದು ರೂಪಾಯಿ ಸಹ 1 ನೇ ಪ್ರತಿವಾದಿ ಕರಕಪ್ಪನಿಗೆ ಕೊಟ್ಟಿಲ್ಲ. 2 ನೇ ವಾದಿ ರೂ.2 ಲಕ್ಷ 20 ಸಾವಿರ ಹಣ ನೀಡಿ 1 ನೇ ಪ್ರತಿವಾದಿಯಿಂದ ಆಸ್ತಿ ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕರಕಪ್ಪ ಆಸ್ತಿ ವಿಚಾರವಾಗಿ 2 ನೇ ವಾದಿಗೆ ಏನು ದಾಖಲೆ ಮಾಡಿಕೊಟ್ಟರು ನನಗೆ ಗೊತ್ತಿಲ್ಲ. ನಾನು ದಾಖಲೆಗೆ ಸಹಿ ಮಾಡಲು ಹೋದಾಗ ನಾನು, ನನ್ನ ಅಣ್ಣ ನಾಗರಾಜ, ನಮ್ಮ ಮಾವ ಕರಕಪ್ಪ, 2 ನೇ ವಾದಿ ಗಿರಿಜವ್ವ ಮಾತ್ರ ಇದ್ದೇವು. ಸಾಕ್ಷಿ ಮುಂದುವರೆದು ನಾನು ದಾಖಲೆ ಸಹಿ ಮಾಡಿದ್ದನ್ನು ಯಾರ ಮುಂದೆ ಹೇಳಬೇಡ ಎಂದು ನನಗೆ ವಿನಂತಿಸಿಕೊಂಡಿದ್ದಳು ಎಂದು ಹೇಳುತ್ತಾರೆ. ನಾನು ತಾಲೂಕು ಕಚೇರಿಗೆ ಹೋಗುವ ಮೊದಲೇ ದಾಖಲೆ ತಯಾರಿಸಿ ಇಟ್ಟಿದ್ದರು. ನಾನು ನನ್ನ ಆಟೋದಲ್ಲಿ ಹೋಗಿ ಸಹಿ ಮಾಡಿದವನೆ ಬಂದೆ ಎಂದು ಹೇಳುತ್ತಾರೆ. ದಾಖಲೆಯನ್ನು ಯಾರು ಬರೆದರು ಮತ್ತು ಅದಕ್ಕೆ ಯಾರು ಮಾಹಿತಿ ನೀಡಿದರು ಗೊತ್ತಿಲ್ಲ. ನಾನು ದಾಖಲೆಯನ್ನು ಓದಿ ನೋಡಿಲ್ಲ. 2 ನೇ ವಾದಿ 1 ನೇ ಪ್ರತಿವಾದಿಗೆ ಹಣ ಕೊಡದೇ ಆಸ್ತಿ ಬರೆಸಿಕೊಂಡ ವಿಷಯ ನನಗೆ ಅದೇ ದಿನ ಗೊತ್ತಾಯಿತು. ಸದರಿ ವಿಷಯವನ್ನು ಯಾರಿಗೂ ಹೇಳದಂತೆ ಗಿರಿಜವ್ವ ಹೇಳಿದ್ದರಿಂದ ನಾನು ಆ ವಿಷಯವನ್ನು ಯಾರ ಮುಂದೆಯೂ ಹೇಳಿಲ್ಲ. 2 ನೇ ವಾದಿ 1 ನೇ ಪ್ರತಿವಾದಿಗೆ ಹಣ ನೀಡದೇ ಆಸ್ತಿ ಖರೀದಿ ಪತ್ರ ಮಾಡಿಕೊಂಡಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ನೀಡದೇ

ಖರೀದಿ ಪತ್ರ ಆಗಿದ್ದು, ಅದನ್ನು ರದ್ದುಪಡಿಸಿಕೋ ಎಂದು ನಾನು 1 ನೇ ಪ್ರತಿವಾದಿಗೆ ಹೇಳಿಲ್ಲ. 2 ನೇ ವಾದಿ ಗಿರಿಜವ್ವ, ಆಕೆಯ ಗಂಡ ಮತ್ತು ಆಕೆಯ ಮಕ್ಕಳು ಕೆಲಸ ಮಾಡಿ ಗಳಿಸಿ ರೂ. 2 ಲಕ್ಷ 20 ಸಾವಿರ ಹಣ ನೀಡಿ 1 ನೇ ಪ್ರತಿವಾದಿಯಿಂದ ಆಸ್ತಿ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಸಹ ಪ್ರತಿವಾದಿಯರಿಗೆ ಸಹಾಯ ಮಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.